**ಅಸಲು ದಾವ ಸಂಖ್ಯೆಃ 193 /2016**

**ಪಿಡಬ್ಲೂ -1**

# ಗೌರವಾನ್ವಿತ 3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ.

ದಿಃ 28-09-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎ ಎ ಎಸ್ ಪರ ವಕೀಲರಿಂದ.

**(ಸಾಕ್ಷಿಗೆ ಕನ್ನಡ ಭಾಷೆ ಬಾರದ ಕಾರಣ ಮರಾಠಿ ಭಾಷೆ ಬರುತ್ತಿದ್ದು ಶ್ರೀ ಬಿ ಎಸ ಪಿ ವಕೀಲರು ರೂ.100 ಗಳ ವೆಚ್ಚದೊಂದಿಗೆ ಕನ್ನಡ ಭಾಷೆಗೆ ತರ್ಜುಮೆಯನ್ನು ಮಾಡಿರುತ್ತಾರೆ )**

ನಾನು ಬೆನಕನಹಳ್ಳಿಯ ಬರಮನಿ ಸೊಸೈಟಿಯಿಂದ 10 ವರ್ಷಗಳ ಹಿಂದೆ ಲೋನ್ ಪಡೆದಿರುತ್ತೇನೆ. ನಾನು ಯಾವುದೇ ಸ್ವತ್ತನ್ನು ಅಡಮಾನ ಮಾಡಿ ಲೋನ್ ಪಡೆದಿರುವುದಿಲ್ಲ. ನಾನು ಲೋನ್ ಪಡೆಯುವ ಸಂದರ್ಭದಲ್ಲಿ ಸಂಬಂಧ ಪಟ್ಟ ದಾಖಲೆಗಳಿಗೆ ಸೊಸೈಟಿಯಲ್ಲಿ ಸಹಿ ಮಾಡಿರುತ್ತೇನೆ.

2. 1 ನೇ ಪ್ರತಿವಾದಿಯು ಯಾವಾಗ ಮದುವೆಯಾಗಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ನನ್ನ ವಾದ ಪತ್ರದಲ್ಲಿ ಲೋನ್ ಪಡೆಯವಾಗ 1 ನೆ ಪ್ರತಿವಾದಿಯು ಜಾಮೀನುದಾರರಾಗಿದ್ದರು ಎಂದು ಬರೆಸಿಲ್ಲ. 1 ನೇ ಪ್ರತಿ 6 ರಿಂದ 7 ವರ್ಷಗಳ ಹಿಂದೆ ಆಕೆಗೆ ಹಣದ ಅವಶ್ಯಕತೆ ಇದೆ ಎಂದು ಹೇಳಿದ್ದರು. ನಾನು 1 ನೇ ಪ್ರತಿವಾದಿಗೆ ಹಣ ನೀಡಿರುವುದಿಲ್ಲ. 1 ನೇ ಪ್ರತಿವಾದಿಯು ನನ್ನನ್ನು ಕೊರ್ಟಗೆ ಬಂದು ಸಹಿ ಮಾಡಲು ಹೇಳಿದ್ದರು, ಮತ್ತು ಆಕೆ ಹಣ ಪಡೆದು ಆಕೆಯೇ ಹಣ ಪಾವತಿಸುವುದಾಗಿ ಹೇಳಿದ್ದರು. ಆಕೆ ಹಣ ಪಡೆಯಲು ನನ್ನ ಸಹಿ ಏಕೆ ಅವಶ್ಯಕತೆ ಎಂದು ನಾನು ಕೇಳಿದ್ದೆ. 1 ನೇ ಪ್ರತಿವಾದಿಯು ನನ್ನ ಕೃಷಿ ಭೂಮಿಯನ್ನು ಅಡಮಾನ ಮಾಡಿ ಆಕೆ ಲೋನ್ ಪಡೆಯುವುದಾಗಿ ಹೇಳಿದ್ದರು. 1 ನೇ ಪ್ರತಿವಾದಿಯು ಪಿಎಲ್ ಡಿ ಬ್ಯಾಂಕಿನಲ್ಲಿ ಹಣ ಪಡೆದಿದ್ದರು. ನಾನು ಪಿ ಎಲ್ ಡಿ ಬ್ಯಾಂಕನಲ್ಲಿ ಸಹಿ ಮಾಡಿದಾಗ ಮಾನೇಜರ ಇರಲಿಲ್ಲ. 1 ನೇ ಪ್ರತಿವಾದಿಯ ಪಿಎಲ್ ಡಿ ಬ್ಯಾಂಕನಲ್ಲಿ 39000/- ರೂ.ಗಳನ್ನು ಲೋನ್ ಪಡೆದಿರುತ್ತಾರೆ. ಸದರಿ

ಲೋನ್ ನನ್ನ ಮತ್ತು ನನ್ನ ಸಹೋದರ ಪ್ರದೀಪ ಶಿವಾಜಿ ಪಾಟೀಲ ಹೆಸರಿನಲ್ಲಿ ಜಂಟಿಯಾಗಿ ಲೋನ್ ಆಗಿತ್ತು. ಸದರಿ ಸಂದರ್ಭದಲ್ಲಿ ನಮ್ಮ ಸ್ವತ್ತಿನ ಉತಾರವನ್ನು ಮಾತ್ರ ಹಾಜರು ಪಡಿಸಿದ್ದೆ. ಸದರಿ ಲೋನನ್ನು ನಾನು ಪಾವತಿಸಿರುವುದಿಲ್ಲ. ಲೋನನ್ನು ಪಡೆಯವ ದಾಖಲೆಗಳಿಗೆ ನಾನು ಸಹಿ ಮಾಡುವಾಗ ಪ್ರತಿವಾದಿಗಳು, ನಾನು ಮತ್ತು ನನ್ನ ಸಹೋದರ  ಪ್ರದೀಪ ಶಿವಾಜಿ ಪಾಟೀಲ ಹಾಜರಿದ್ದರು. ನಾನು ಲೋನ ದಾಖಲೆಗಳಿಗೆ ಉಪನೊಂದನಾಧಿಕಾರಿಗಳ ಕಚೇರಿ ಬಳಿ ಸಹಿ ಮಾಡಿರುತ್ತೇನೆ. ನಾನು ಉಪನೊಂದನಾಧಿಕಾರಿಗಳ ಒಳಗ ಇದ್ದೆ.  ನನ್ನ ಪೋಟೊವನ್ನು ಉಪನೊಂದನಾಧಿಕಾರಿಗಳ ಕಚೇರಿಗಳ ಒಳಗೆ ತೆಗೆದಿರುತ್ತಾರೆ. ಉಪನೊಂದನಾಧಿಕಾರಿಗಳ ಕಚೇರಿ ಒಳಗೆ ನಾನು ಸಹಿ ಮಾಡಿರುತ್ತೇನೆ. ಈ ಮೇಲೆ ಹೇಳಿದ ಯಾವ ವರ್ಷಗಳ ಯವ ತಿಂಗಳಿನಲ್ಲಿ ನಡೆದಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ.

3 ನಾನು ಸಾವಿರಾರು ಬಾರಿ ಪ್ರತಿವಾದಿಗಳನ್ನು ಲೋನ ಪಾವತಿಸಿರುತ್ತಾರೆ ಇಲ್ಲವೆ ಎಂದು ಕೇಳಿರುತ್ತೇನೆ. ನಾನು ಪ್ರತಿವಾದಿಗಳನ್ನು ಲೋನ ಕಂತು ಪಾವತಿಸುವಂತೆ ಬರವಣೆಯಲ್ಲಿ ಕೇಳಿರುವುದಿಲ್ಲ. ನಾನು ಪಿ.ಎಲ್.ಡಿ ಬ್ಯಾಂಕನಿಂದ 20 ನೋಟಿಸಗಳನ್ನು ಪಡೆದಿರುತ್ತೇನೆ. ನಾನು ಸದರಿ ನೋಟಿಸಗಳನ್ನು ಹಾಜರು ಪಡಿಸಿರುವುದಿಲ್ಲ. ನಾನು ಸದರಿ ನೋಟಿಸಗಳನ್ನು ಅವಶ್ಯಕತೆ ಇದ್ದಲ್ಲಿ ನ್ಯಾಯಲಯಕ್ಕೆ ಹಾಜರು ಪಡಿಸುತ್ತೇನೆ.

**4.** ನಾನು ಪ್ರತಿವಾದಿಗಳಿಗೆ ಬೇರೆ ಯಾವುದಾರು ದಾಖಲೆಗಳನ್ನು ಬರೆದು ಕೊಟ್ಟಿರಬಹುದು. ನಾನು ಪ್ರತಿವಾದಿಗಳಿಂದ ಯಾವುದೇ ಹಣ ಪಡೆದಿಲ್ಲ. ಪ್ರತಿವಾದಿಗಳು 51000/- ರೂ. ಗಳನ್ನು ದಿಃ 17-01-2008 ರಲ್ಲಿ ನನ್ನ ಲೋನ ಅಕೌಂಟಗೆ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿನ ಸಹಿ ನನ್ನದು. ಸಾಕ್ಷಿಗೆ ಒಂದು ನೊಂದಾಯಿತ irrevocable GPA ತೋರಿಸಲಾಗಿ ಸದರಿ ದಾಖಲೆಯಲ್ಲಿ ನಿಮ್ಮ ಸಹಿ ಇರುತ್ತದೆ ಎಂದರೆ ಸಾಕ್ಷಿಯ ಸದರಿ ದಾಖಲೆ ಮತ್ತು ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು  ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿನ ವಾದಿ ಗುರುತಿಸಿದ ಸಹಿಯನ್ನು  ನಿಡಿ-1 ಎ. ಎಂದು ಗುರುತಿಸಲಾಯಿತು. ನಿಡಿ-1 ಎ ನ್ನು ನಾನು ನನ್ನ ಮನೆಯಲ್ಲಿ ಮಾಡಿರುತ್ತೇನೆ. ಸಾಕ್ಷಿಗೆ ಒಂದು ಕರಾರು ಪತ್ರವನ್ನು ತೋರಿಸಲಾಗಿ ಅದರಲ್ಲಿ ನಿಮ್ಮ ಸಹಿ ಇದೆ ಎಂದರೆ ಸಾಕ್ಷಿಯ ಸದರಿ ದಾಖಲೆಯನ್ನು ನೋಡಿ ತನ್ನ ಸಹಿಯನ್ನು

ಗುರುತಿಸಿದ ಕಾರಣ ಸದರಿ ದಾಖಲೆಯನ್ನು ನಿಡಿ-2 ಎಂದು, ಮತ್ತು ವಾದಿಯು ನೋಡಿ ಗುರುತಿಸಿದ ಸಹಿಯನ್ನು ನಿಡಿ-2 ಎ. ಎಂದು ಗುರುತಿಸಲಾಯಿತು. ಸಾಕ್ಷಿಗೆ 50 ರೂ.ಗಳ ಬಾಂಡ ಪೇಪರ ಮೇಲೆ ಬರೆದ ಒಂದು ರಸಿದಿಯನ್ನು ತೋರಿಸಲಾಗಿ ಸದರಿ ದಾಖಲೆಯಲ್ಲಿ ನಿಮ್ಮ ಸಹಿ ಇದೆ ಎಂದರೆ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ದಾಖಲೆಯನ್ನು ನಿಡಿ-3 ಎಂದು, ವಾದಿಯು ಗುರುತಿಸಿದ ನಿಡಿ-3 ರಲ್ಲಿನ ಸಹಿಯನ್ನು ನಿಡಿ-3 ಎ. ಎಂದು ಗುರುತಿಸಲಾಯಿತು. ನಿಡಿ-3 ರಲ್ಲಿರುವ ಮೊದಲ ಪುಟದಲ್ಲಿರುವ ಸಹಿ ನನ್ನದು ಸಾಕ್ಷಿಯು ಮುಂದುವರೆದು ಸದರಿ ಸಹಿಗಳನ್ನು, ತನ್ನ ಮನೆಯಲ್ಲಿ ಮಾಡಿರುವುದಾಗಿ ನುಡಿಯುತ್ತಾರೆ. ಸಾಕ್ಷಿಗೆ ಒಂದು ಕಾಗದವನ್ನು ತೋರಿಸಲಾಗಿ ಅದರಲ್ಲಿ ನಿಮ್ಮ ಸಹಿ ಇರುತ್ತದೆ ಎಂದರೆ ಸಾಕ್ಷಿಯು ಸದರಿ ತನ್ನ ಸಹಿ ಆಗಿರುತ್ತದೆ ಎಂದು ಗುರುತಿಸಿದ ಕಾರಣ ಸದರಿ ದಾಖಲೆಯನ್ನು ನಿಡಿ-4 ಎಂದು, ನಿಡಿ-4 ರಲ್ಲಿ ವಾದಿಯು ಗುರುತಿಸಿದ ಸಹಿಯನ್ನು ನಿಡಿ-4 ಎ. ಎಂದು ಗುರುತಿಸಲಾಯಿತು. ನಾನು 1 ನೇ ಪ್ರತಿವಾದಿಗೆ ನನ್ನ 20 ಗುಂಟೆಯನ್ನು 1 ಲಕ್ಷದ 60 ಸಾವಿರ ರೂ.ಗಳಿಗೆ ಮಾರಾಟ ಮಾಡಲು ಕರಾರು ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ನಾನು ಆ ಕುರಿತು 1 ಲಕ್ಷದ 1 ಸಾವಿರ ರೂ.ಗಳನ್ನು ಮುಂಗಡವಾಗಿ ಪಡೆದಿದ್ದೆ ಎಂದರೆ ಸರಿಯಲ್ಲ. ನಾನು ಸದರಿ ಕರಾರರಿನ ಅನುಷ್ಠಾನ ಮಾಡಲು ಅಧಿಕಾರ ಪತ್ರದಲ್ಲಿ ಮಾಡಿಕೊಂಟ್ಟಿದ್ದೆ ಎಂದರೆ ಸರಿಯಲ್ಲ. ನಾನು ಕರಾರನ್ನು ಮಾಡಿಕೊಡಬಾರದು ಎಂದು ಹಣವನ್ನು ಹಿಂತುರುಗಿಸಬಾರದದು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿಯಿದೆ .**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**